ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

8

ಲಾಖೆ / ವಿಷಯ : DEPARTMENT / SUBJECT: ಬಿಬಿಎಂಪಿ

ತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ   ದಿನಾಂಕ : DATE : 27/6/2010

# ರಾಜಕಾಲುವೆಗೆ ಕೊಳಚೆ ನೀರು 496 ಕಟ್ಟಡಗಳಿಗೆ ನೋಟಿಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಒಳಚರಂಡಿ ಸಂಪರ್ಕ ಹೊಂದದೆ ಕೊಳಚೆ ನೀರನ್ನು ನೇರವಾಗಿ ರಾಜಕಾಲುವೆಗೆ ಹರಿಸುತ್ತಿರುವ 496 ಕಟ್ಟಡಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜಲಮಂಡಳಿಯ ಜಂಟಿ ಸಮಿತಿ ಪತ್ತೆ ಮಾಡಿದೆ. ಈ ಎಲ್ಲ ಕಟ್ಟಡಗಳಿಗೆ ನೋಟಿಸ್ ಜಾರಿ ಮಾಡಿ ಎಚ್ಚರಿಕೆ ನೀಡಲಾಗಿದೆ. ಈ ಪೈಕಿ ಬಿಬಿಎಂಪಿ ಪೂರ್ವ ವಲಯದಲ್ಲಿ 268 ಕಟ್ಟಡಗಳಿವೆ.

ಕೆರೆ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಈಗಾಗಲೇ ಹಲವು ಸೂಚನೆಗಳನ್ನು ನೀಡಿದೆ. ಈ ಸೂಚನೆಗಳಿಗೆ ತಕ್ಕಂತೆ ಸಮಿತಿ ರಚಿಸಿ ಪರಿಶೀಲಿಸಲಾಗಿದೆ. 800 ಕಿ.ಮೀ ಉದ್ದದ ರಾಜಕಾಲುವೆಯ ಭಾಗಗಳನ್ನು ಜಂಟಿ ಸಮಿತಿಯು ಪರಿಶೀಲಿಸುತ್ತಿದ್ದು ಈವರೆಗೆ 200 ಕಿ.ಮೀ ವ್ಯಾಪ್ತಿಯ ಪರಿಶೀಲನೆ ಪೂರ್ಣಗೊಂಡಿದೆ.

ಕಟ್ಟಡಗಳು ನಿರ್ಮಾಣವಾದ ಬಳಿಕ ಜಲಮಂಡಳಿಯ ಒಳಚರಂಡಿ ಸಂಪರ್ಕ ಹೊಂದಬೇಕು. ಇದಕ್ಕಾಗಿ ಜಲಮಂಡಳಿಗೆ ಅರ್ಜಿ ಸಲ್ಲಿಸಿ ಸಂಪರ್ಕ ಕಲ್ಪಿಸಿಕೊಳ್ಳಬೇಕು.

ಮತ್ತೊಂದೆಡೆ ಜಲಮಂಡಳಿ ಪ್ರತ್ಯೇಕವಾಗಿ ಮಾಹಿತಿ ಸಂಗ್ರಹ ಕಾರ್ಯ ನಡೆಸುತ್ತಿದೆ. ಜಲಮಂಡಳಿಯಲ್ಲಿ ಕಟ್ಟಡಗಳ ಬಗ್ಗೆ ಸರಿಯಾದ ಮಾಹಿತಿ ಲಭ್ಯವಿಲ್ಲ.



**ರಾಜಕಾಲುವೆಗೆ ಕೊಳಚೆ ನೀರು ಹರಿಸುತ್ತಿರುವುದನ್ನು ಜಂಟಿ ಸಮಿತಿಯು ಪತ್ತೆ ಮಾಡುತ್ತಿದೆ. ನಿಯಮ ಉಲ್ಲಂಘನೆ ಕಂಡು ಬಂದಾಗ ಜಲಮಂಡಳಿ ಹಾಗೂ ಕೆಎಸ್‌ಪಿಸಿಬಿ ಕ್ರಮ ಕೈಗೊಳ್ಳುತ್ತದೆ.**

**- ಶ್ರೀನಿವಾಸಲು** ಸದಸ್ಯ ಕಾರ್ಯದರ್ಶಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

**ಜಂಟಿ ಸಮಿತಿ ಪ್ರತಿ ದಿನ ನಿಗದಿತ ಕಿ.ಮೀ.ನಷ್ಟು ಪರಿಶೀಲನೆ ಮಾಡುತ್ತಿದೆ. ಕಟ್ಟಡಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸುವುದು ನಮ್ಮ ಕೆಲಸ. ಹೊಸದಾಗಿ ಅರ್ಜಿ ಸಲ್ಲಿಸಿದರೆ ಸಂಪರ್ಕ ನೀಡಲಾಗುವುದು.**

**- ಕೆಂಪರಾಮಯ್ಯ** ಪ್ರಧಾನ ಮುಖ್ಯ ಎಂಜಿನಿಯರ್, ಜಲಮಂಡಳಿ